International Journal of Kannada Research 2022; 8(3): 30-32




International Journal of Kannada Research
www.kannadajournal.com

**ISSN: 2454–5813**
IJKR 2022; 8(3): 30-32
© 2022 IJKR
www.kannadajournal.com
Received: 07-06-2022
Accepted: 09-07-2022

**ಪ್ರವೀಣ ಗುರುಶಾಂತ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ಕರ್ನಾಟಕ, ಭಾರತ

**Corresponding Author:**
**ಪ್ರವೀಣ ಗುರುಶಾಂತ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ಕರ್ನಾಟಕ, ಭಾರತ

# ಕನ್ನಡ ಸಂಶೋಧನಾ ಸಾಹಿತ್ಯದಲ್ಲಿ ಬೌದ್ಧಧರ್ಮದ 'ಸಾಮಾಜಿಕ ಚಿಂತನೆಗಳು'

**ಪ್ರವೀಣ ಗುರುಶಾಂತ**

ಕನ್ನಡ ಸಾಹಿತ್ಯವು ಸಂಶೋಧನೆಗೆ ಒಳಗಾಗಿ ಹೊಸ ಹೊಸ ಚಿಂತನೆಗಳ ಮೂಲಕ ಬೆಳದು ಬರುತ್ತಿರುವುದು ಕಾಣುತ್ತೆವೆ. ಈ ನಿಟ್ಟಿನಲ್ಲಿ ಬೆಳದು ಬರುತ್ತಿರುವ ಈ ಸಾಹಿತ್ಯವು ಹಲವು ಬಗೆಯಲ್ಲಿ ಚೀಗುರೋಡೆದು ಚಿಂತನೆಗೆ ಒಳಪಟ್ಟಿದೆ.ಈ ಚಿಂತನೆಗಳಲ್ಲಿ ಧರ್ಮವು ಪ್ರಮುಖವಾಗಿ ನಿಲ್ಲುತ್ತೆ. ಭಾರತೀಯ ಸಂಸ್ಕೃತಿಯನ್ನು ಗಮನಿಸಿದಾಗ ಇಲ್ಲಿ ಹಲವಾರು ಧರ್ಮಗಳು ಕಾಣಸೀಗುತ್ತವೆ. ಹಿಂದೂ, ಮುಸ್ಲಿಂ, ಜೈನ್, ಸಿಖ್ಖ್ ಮತ್ತು ಬೌದ್ಧ ಧರ್ಮಗಳು ಪ್ರಮುಖವಾಗಿವೆ. ಇಲ್ಲಿ ಬೇರೆ ಬೇರೆ ಧರ್ಮಗಳ ಜಾತಿ ಜನಾಂಗದ ಜನರು ಒಟ್ಟಿಗೆ ಬಾಳುತ್ತಾ ಶಾಂತಿ ಸೌಹಾರ್ದತೆಯಿಂದ ಕೂಡಿದ ನೆಲವಾಗಿದೆ. ಮಾನವ ಜನ್ಮದ ಉದ್ದಾರಕ್ಕಾಗಿ ಜನ್ಮತಾಳಿದ ಧರ್ಮಗಳಲ್ಲಿ ಬೌದ್ಧ ಧರ್ಮವು ಮುಖ್ಯವಾಗಿದೆ. ಬೌದ್ಧ ಧರ್ಮದ ಸ್ಥಾಪಕನಾದ ಗೌತಮ ಬುದ್ದನು ಏಷಿಯಾದ ಬೆಳಕು ಎಂದು ಕರೆಸಿಕೊಂಡ. ಹೀಗಾಗಿ ಇಡಿ ವಿಶ್ವವೇ ಇಂದು ಭಾರತವನ್ನು ಬೌದ್ಧಧರ್ಮದ ಹಿನ್ನಲೆಯಲ್ಲಿ ಗುರುತಿಸುತ್ತಿದೆ ಎಂಬುದು ಸುಳ್ಳಲ್ಲ. ಬೌದ್ಧ ಧರ್ಮ ಅಷ್ಟು ವಿಶಾಲತೆಯನ್ನು ಹೊಂದಿದೆ ಎಂಬುದಕ್ಕೆ ಬೌದ್ಧದರ್ಮದ ತತ್ವಚಿಂತನೆಗಳೆ ಕಾರಣ. ಹೀಗಾಗಿ ಪ್ರಸ್ತುತ ಲೇಖನದಲ್ಲಿ ಕನ್ನಡ ಸಂಶೋಧನ ಸಾಹಿತ್ಯದಲ್ಲಿ ಬೌದ್ಧ ಧರ್ಮದ ಸಾಮಾಜಿಕ ಚಿಂತನೆಗಳ ಕುರಿತು ಅರಿಯಲಾಗಿದೆ.

'ಅಹಿಂಸೊ ಪರಧರ್ಮದಲ್ಲಿ' ನಂಬಿಕೆ ಹೊಂದಿದ ಬೌದ್ಧ ಧರ್ಮ ಭಾರತದಲ್ಲಿ ಅಷ್ಟೆ ಅಲ್ಲದೆ ಇಡಿ ವಿಶ್ವದ ತುಂಬೆಲ್ಲಾ ತನ್ನ ಧರ್ಮದ ಬೆಳಕು ಹರಡಿ ವಿಶೇಷ ಪ್ರಾತಿನಿತ್ಯವನ್ನು ಪಡೆದ ಧರ್ಮವಾಗಿ ಗುರುತಿಸಿ ಕೊಂಡಿದೆ. ವಿಶ್ವವ್ಯಾಪಿಯಲ್ಲಿ ಹೆಸರು ಪಡೆದಿರುವ ಬೌದ್ಧ ಧರ್ಮ ತನ್ನದೆ ಆದ ವಿಭಿನ್ನ ಚಿಂತನೆಗಳು ಹೊಂದಿದೆ. "ಚಿಂತನೆ ಎಂದರೆ ಯೋಚನೆ, ಆಲೋಚನೆ, ಧ್ಯಾನ, ಉಪವಾಸ ಎಂಬ ಅರ್ಥಗಳು ಒಳಗೊಂಡಿದೆ. ಪ್ರಪಂಚದಲ್ಲಿನ ಹಲವಾರು ವಸ್ತು ವಿಷಯಗಳ ಕುರಿತು ನಡೆಯುವ ಚರ್ಚೆ, ಆಲೋಚನೆ, ತರ್ಕ ಮತ್ತು ವೈಚಾರಿಕ ನೀಲುವುಗಳನ್ನು ಚಿಂತನೆಯಂದು ಕರೆಯಲಾಗಿದೆ."[೧] ಹೀಗೆ ಚರ್ಚೆ, ತರ್ಕಗಳ ಮೂಲಕ ಒಡಮೂಡವ ಸಾಹಿತ್ಯ ಚಿಂತನ ಅಥವಾ ವಿಚಾರ ಸಾಹಿತ್ಯವೆಂತಲೂ ಕರೆಯುತ್ತಾರೆ. ಈ ಸಾಹಿತ್ಯ ಪ್ರಕಾರಗಳಲ್ಲಿ ಸಾಮಾಜಿಕ ಚಿಂತನೆಯು ಒಳಪಡುತ್ತದೆ.

ಭಾರತೀಯ ಸಾಮಜಿಕ ಸ್ಥಿತಿಗತಿಯನ್ನು ನಾವೊಮ್ಮೆ ಅವಲೋಕನ ಮಾಡಿದಾಗ ಎದುರಾಗುವ ಸಾಮಾಜಿಕ ಚಿಂತನೆಯಲ್ಲಿ ಜಾತಿ, ಲಿಂಗ/ಮಹಿಳೆ, ನಂಬಿಕೆಗಳು, ಆಚರಣೆಗಳು. ಪ್ರಮುಖವಾಗಿವೆ. ತಲೆ ತಲಾಂತರದಿಂದ ಬಂದಿರುವ ಈ ಪದ್ದತಿಯನ್ನು ಬೌದ್ಧಧರ್ಮದ ಹಿನ್ನಲೆಯಲ್ಲಿ ಚಿಂತನೆಗೆ ಒಳಪಡಿಸಲಾಗಿದೆ. ಬೇರೆ ಬೇರೆ ಧರ್ಮಗಳನ್ನು ವಿವಿಧ ಬಗೆಯ ನಂಬಿಕೆಗಳನ್ನು ಹೊಂದಿ ತಮ್ಮದೆ ಆದ ಚೌಕಟ್ಟನ್ನು ಹಾಕಿಕೊಂಡು ಬಂದಿರುವುದು ಕಾಣುತ್ತವೆ. ಆದರೆ ಬೌದ್ಧ ಧರ್ಮ ಸಾಮಾಜಿಕವಾಗಿ ಈ ಮೇಲಿನವುಗಳ ಕುರಿತಾಗಿರುವ ಚಿಂತನೆಗಳು ಹೇಗೆ ಭಿನ್ನಾವಾಗಿವೆ ಎಂಬುದು ನಾವಿಲ್ಲಿ ಈ ಕೆಳಗಿನಂತೆ ತಿಳಿದು ಕೋಳ್ಳಲಾಗಿದೆ.

## ಜಾತಿ

ಭಾರತವು ಒಂದು ಜಾತ್ಯಾತೀತ ರಾಷ್ಟ್ರವೆಂದು ಗುರುತಿಸಿಕೊಂಡಿದೆ. ಆದರೆ ಇದು ಹೆಸರಿಗೆ ಮಾತ್ರ ಏಕೆಂದರೆ ಶತ ಶತಮಾನಗಳಿದಂದ ರೋಡಿಗಥವಾಗಿ ಬಂದಿರುವ ಜಾತಿ ಪದ್ದತಿಯು ಸಾಮಾಜಿಕ ಚಿಂತನೆಯಲ್ಲಿ ಬಗೆಹರಿಯದ ಸಮಸ್ಯೆಯಾಗಿದೆ. ಈ ಜಾತಿ ಪದ್ದತಿಯು ಚರಿತ್ರೆಯೂದ್ದಕ್ಕೂ ಮಾನವ ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿಸಿಕೊಂಡು ಬಂದಿದೆ. ಇದರ ಪರಿಣಾಮವಾಗಿ ಮನುಷ್ಯ

ಮನುಷ್ಯರ ನಡುವೆ ಭಿನ್ನಭಾವ ಏರ್ಪಟ್ಟು ದಲಿತರನ್ನು ಕೀಳಾಗಿ ಕಾಣುತ್ತಾ ಬಂದಿರವುದು. ಇಂತಹ ಅನಿಷ್ಟ ಪದ್ಧತಿಯನ್ನು ವಿರೋಧಿಸಲು ಮತ್ತು ಅದರಿಂದ ಹೊರ ಬರಲು ಬೌದ್ಧ ಧರ್ಮವು ಆಸರೆಯಾಗಿ ಕಂಡಿತು. ಇದರಿಂದ ಹಲವಾರು ಸಾಮಜಿಕ ಚಿಂತಕರು ಬೌದ್ಧಧರ್ಮದ ಸಾರವನ್ನು ಅರಿತು ಅದರ ಕುರಿತು ಅಧ್ಯಯನ ಮಾಡುತ್ತಾ ಪ್ರಗತಿಪರ ಧಾರೆಯಲ್ಲಿ ಅಸಮಾನತೆಯ ವಿರುದ್ದ ಹೋರಾಟ ನಡೆಸುವಲ್ಲಿ ಹಲವು ದಾರ್ಶನಿಕರ ವೈಚಾರಿಕ ನಿಲುವುಗಳು ಪ್ರೇರಕ ಶಕ್ತಿಯಾಗಿ ಕಾರ್ಯ ನಿರ್ವಹಿಸಿವೆ. ಅದರಲ್ಲಿ ಬುದ್ಧ, ಬಸವಣ್ಣ, ವಿವೇಕಾನಂದ, ಪೆರಿಯಾರ, ಜ್ಯೋತಿ ಬಾ ಫುಲೆ, ಅಂಬೇಡ್ಕಕರ್ ಹೀಗೆ ಮುಂತಾದವರ ಚಿಂತನೆಗಳು ಕಾಣುತ್ತೆವೆ. ಬೌದ್ಧ ಧರ್ಮವು ವಿಶಾಲವಾದ ತತ್ವ ಸಿದ್ದಾಂತಗಳ ಮೇಲೆ ಬಂದಿರುವುದರಿಂದ ಇಲ್ಲಿ ಜಾತಿಗಳ ಕುರಿತಾದದ ತಾರತಮ್ಯ ಕಾಣುವುದಿಲ್ಲ. ಹೀಗಾಗಿ ಈ ಧರ್ಮ ತನ್ನದೆಯಾದ ಮಹತ್ವ ಹೊಂದಿದೆ. ಹಿಂದೂ ಧರ್ಮದಲ್ಲಿ ಹುಟ್ಟಿದ ಡಾ. ಬಾಬಾ ಸಾಹೇಬ ಅಂಬೇಡ್ಕರರು ಬೌದ್ಧ ಧರ್ಮದ ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆ. ಇದರಿಂದ ಸಾಂಪ್ರದಾಯಿಕ ಹಿಂದೂ ಧರ್ಮದಲ್ಲಿ ಬದಲಾವಣೆಯನ್ನು ಸಾಧ್ಯವಿಲ್ಲವೆಂದು ಅರಿತ ಅಂಬೇಡ್ಕರರು ೧೯೫೬ ಅಕ್ಟೋಬರ್ ೧೪ರಂದು ತನ್ನ ಅಸಂಖ್ಯಾತ ದಲಿತ ಬಂಧುಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸುತ್ತಾರೆ. ಇದರಿಂದ ಪ್ರೇರಿತರಾದ ಕನ್ನಡ ದಲಿತ ಚಿಂತಕರು ಬಂಡಾಯದ ಮೂಲಕ ಬೌದ್ಧ ಧರ್ಮದ ಹಿನ್ನಲೆಯಲ್ಲಿ ಸಾಮಾಜಿಕ ಚಿಂತನೆಯನ್ನು ಬಳಸಿಕೊಂಡು ಹಿಂದೂ ಧರ್ಮದ ಸಾಮಾಜಿಕ ಅಸಮಾನತೆಯ ವಿರುದ್ದ ಹೋರಾಡುತ್ತ ಬಂದಿದ್ದಾರೆ. ಇದಕ್ಕೆ ಮುಖ್ಯ ಕಾರಣ ಬೌದ್ಧ ಧರ್ಮದಲ್ಲಿನ ಸಾಮಾಜಿಕ ಸಮಾನತೆಯದ್ದಾಗಿದೆ. ಇಲ್ಲಿ ಯಾವುದೆ ಜಾತಿ ಜನಾಂಗ ಕಂಡು ಬರದೆ ಮಾನವರೆಲ್ಲ ಸಮಾನರು ಎಂಬ ಭಾವ ಹೊಂದಿದೆ.

**ಲಿಂಗ/ಮಹಿಳೆ**

ಭಾರತೀಯ ನೆಲದಲ್ಲಿ ಲಿಂಗ ತಾರತಮ್ಯ ಕಂಡುಕೊಂಡು ಬಂದಿರುವುದು ಆರ್ಯರ ಆಕ್ರಮಣಕಾರಿ ನೀತಿಯಿಂದ. ಈ ಆಕ್ರಮಣ ಸಂಸ್ಕೃತಿಯಲ್ಲಿ ಮಹಿಳೆ ಮತ್ತು ಶೂದ್ರರು ಒಂದೆ ನೆಲೆಯಲ್ಲಿ ಬಂದನಕ್ಕೆ ಒಳಗಾಗಿ ಬದುಕುತ್ತಿರುವರು. ಸ್ತ್ರೀಯರನ್ನು ಮತ್ತು ಶೂದ್ರರನ್ನು ತುಂಬಾ ಕೀಳಾಗಿ ಕಾಣುವಂತ ವಾತವರಣ ಆರ್ಯರ ಪ್ರವೃತ್ತಿಯಲ್ಲಿ ಕಾಣಬಹುದು. ಇಲ್ಲಿ ಶೂದ್ರರನ್ನು ಅಸುರರನ್ನಾಗಿ ಮಹಿಳೆಯರನ್ನು ರಾಕ್ಷಸಿಯರನ್ನಾಗಿ ಚಿತ್ರಿಸಿದ್ದಾರೆ. ಈ ಬಗೆಯ ಹೀನ ನಡೆಯನ್ನು ಗಮನಿಸಿದಾಗ ಸಾಮಜಿಕ ಚಿಂತನೆ ಅವಶ್ಯವಾಗಿ ನಿಲ್ಲುತೆ. ಆದರೆ ಬುದ್ದನ ಸಾಮಜಿಕ ಚಿಂತನೆಗಳು ವಿಭಿನ್ನಾವಾಗಿ ಕಾಣುತ್ತವೆ. ಇಲ್ಲಿ ಎಲ್ಲಾಜೀವಿಗಳು ಒಂದೆ ಎಂಬ ಭಾನೆಯನ್ನು ಹೊಂದಿ ಸರ್ವರನ್ನ ಸಮಾನರಾಗಿ ಕಾಣುವ ವಾತವರಣ ಕಲ್ಪಿಸಿ ಮಹಿಳೆಯರಿಗೂ ಸಮಾನ ಸ್ಥಾನಮಾನ ನೀಡಿದ ಮೊದಲ ಧರ್ಮ ಇದಾಗಿದೆ. ಮಹಿಳೆಯರೂ ಕೂಡಾ ಧರ್ಮಕ್ಕೆ ಶರಣಾಗಿ ಬದುಕುವಂತೆ ಮಾಡಿದೆ. ಬೌದ್ಧ ಧರ್ಮದ ಮಹಿಳೆಯ ಅಥವಾ ಮಹಿಳೆಯರ ಬುದ್ಧನ ಮಹಿಳಾ ಪರ ಧೋರಣೆಗಳು ಕುರಿತಾಗಿ ಡಾ. ಬಾಬಾ ಸಾಃಎಬ ಅಂಬೇಡ್ಕರ ಅವರು ಮಂಡಿಸಿರುವ ವಿಚಾರಗಳಿಗೆ ಧನಂಜಯ್ ಕೀರ್ ಈ ರೀತಿಯಾಗಿ ಪ್ರತಿಕ್ರೀಯೆ ನೀಡಿದ್ದಾರೆ. " ಬೌದ್ಧ ಧರ್ಮ ಸೇರಲು ಮುಂದೆ ಬಂದ ಮಹಿಳೆಯರನ್ನು ಬುದ್ದ ಕಡೆಗಣಿಸಲಿಲ್ಲ, ಮಹಿಳೆಯರನ್ನು ಆಧ್ಯಾತ್ಮಿಕವಾಗಿ ಬುದ್ದ ವಂಚಿಸಲಿಲ್ಲ, ಮಹಿಳೆಯರು ಬೌದ್ಧ ಧರ್ಮದಲ್ಲಿ ಪರಿವ್ರಾಜಕರಾಗಬಹುದು ಎಂಬುದನ್ನು ಸ್ಪಷ್ಟಪಡಿಸುವ ಮೂಲಕ ಮಹಿಳೆಯರಿಗೆ ಸರಿಸಮಾನವಾದ ಸ್ಥಾನಮಾನ ನೀಡಿದ್ದ. ಇದು ಭಾರತೀಯ ಮಹಿಳೆಯರ ಪಾಲಿಗೆ ಕ್ರಾಂತಿಕಾರಿ ಬದಲಾವಣೆಯಾಗಿತ್ತು. ಅವರಿಗೆ ಸನ್ಮಾನ ನೀಡಿದ ಸಂಕೇತವಾಗಿತ್ತು. ಅವರ ಸ್ವಾತಂತ್ಯವನ್ನು ಎತ್ತಿ ಹಿಡಿದಂತಾಗಿತ್ತು. ಯಥಾಸ್ಥಿತಿವಾದಿಗಳು ಮಾಡಿದ ಕೆಡನ್ನು ಬುದ್ಧ ನಿವಾರಿಸಿದ. ಭಾರತೀಯ ಮಹಿಳೆಯ ಮೇಲೆ ಹಾಕಿದ ಸಂಕೋಲೆಯನ್ನು ಬುದ್ದ ಕಡೆದು ಎಸೆದಿದ್ದ."[೨] ಭಾರತೀಯ ಸಂಸ್ಕೃತಿಯಲ್ಲಿನ ಮಹಿಳೆಯರ ಕುರಿತಾದ ಲಿಂಗ ತಾರತಮ್ಯವನ್ನು ವಿಭಿನ್ನ ನೆಲೆಯಲ್ಲಿ ಚಿಂತನೆಗೆ ಮೊದಲು ಮಾಡಿದು ಬೌದ್ಧ ಧರ್ಮ ಸಾಮಾಜಿಕ ಚಿಂತೆನೆಯಾಗಿದೆ. ಲಿಂಗ ತಾರತಮ್ಯಕ್ಕೆ ಇಲ್ಲ ಜಾಗವಿಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

**ನಂಬಿಕೆಗಳು**

ಜಗತ್ತಿನ ಪ್ರತಿಯೋಂದು ಧರ್ಮವು ನಂಬಿಕೆಯ ಆಧಾರದ ಮೇಲೆ ನೆಲೆಯೂರಿ ನಿಂತಿವೆ ಎಂಬ ಮಾತು ಸೃಷ್ಟಿ ಸತ್ಯವಾದದ್ದು. ಇಲ್ಲಿ ಪ್ರತಿಯೊಂದು ಧರ್ಮವು ತನ್ನದೆ ಆದ ನಂಬಿಕೆಗಳನ್ನು ಹೋದಿ ಪ್ರಚಲಿತವಾಗಿ ಆಚರಣೆಯ್ಲ್ಲಲಿರುವುದು ಕಾಣುತ್ತೆವೆ. ಧರ್ಮ ಪ್ರಚಾರಕ್ಕಾಗಿಯೆ ಆಯಾ ಧರ್ಮಗಳು ಹಲವಾರು ಬಗೆಯಲ್ಲಿ ವಿವಿಧ ಯೋಜನೆಗಳು ಹಾಕಿಕೊಂಡು ಪ್ರಚಲಿತದಲ್ಲಿರುವುದು ನಾವು ಕಾಣುತ್ತೆವೆ. ಆದರೆ ಜನ ತಮ್ಮ ನೆಮ್ಮದಿಯ ಬದುಕಿಗಾಗಿ, ಶಾಂತಿಯುತ್ ಪರಿಸರಕ್ಕಾಗಿ, ಸ್ನೇಹ ಮಯವಾದ ಬಾಳ್ವೆಗಾಗಿ, ಉತ್ತಮ ಗೌರವಕ್ಕಾಗಿ ಬೌದ್ಧಧರ್ಮದ ಮೊರೆ ಹೋಗಿದ್ದಾರೆ ಹೊಗುತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಆ ಧರ್ಮದ ಸರಳವಾದಂತಹ ನಂಬಿಕೆಗಳು ಬೌದ್ಧ ಧರ್ಮವು ಬೇರೆ ಧರ್ಮದಂತೆ ಜನರ ಮೇಲೆ ಹೊರೆಹಾಕಿಲ್ಲವೆಂಬುದು ಇಲ್ಲಿ ಸ್ಪಷ್ಟವಾಗಿ ಕಾಣುತ್ತೆ. ಹಾಗೇಯೆ ಬುದ್ದ ತಾನು ಪ್ರತಿಪಾದಿಸಿದ ತತ್ವಸಿದ್ದಾಂತಗಳನ್ನು ಎಂದೂ 'ಧರ್ಮ'ದ ವ್ಯಾಪ್ತಿಗೆ ಒಳಪಡಿಸಲಿಲ್ಲ. ಅವನದು ಜನತೆಯ ಬದುಕನ್ನು ಶಾಂತಿ ಸಮಾನತೆಯಲ್ಲಿ ಮುನ್ನಡೆಸುವ ದರ್ಶನಾಗಿತ್ತು. ಇಂತಹ ನಂಬಿಕೆ ಬೌದ್ಧ ಧರ್ಮ ಹೊಂದಿದೆ. ಬುದ್ದನು ನಡೆಸಿದ ಸತ್ಯದರ್ಶನದ ಹುಡುಕಾಟದಲ್ಲಿ ಕಂಡುಕೊಂಡ ಪ್ರಮುಖ ಅಂಶಗಳೆಂದರೆ ಪಂಚಶೀಲ, ನಾಲ್ಕು ಆರ್ಯಸತ್ಯಗಳು ಹಾಗೂ ಅಷ್ಟಾಂಗ ಮಾರ್ಗಗಳು. ಈ ಅಂಶಗಳ ಮೂಲಕ ಮಾನವನ ದುಃಖಕ್ಕೆ ಕಾರಣಗಳು ಹುಡುಕಿ ಆ ದುಃಖದಿಂದ ಪರಿಹಾರ ಮಾರ್ಗವನ್ನು ತೋರಿದ. ಆದ್ದರಿಂದ ಬೌದ್ಧ ಧರ್ಮದ ನಂಬಿಕೆಗಳಲ್ಲಿ ಈ ಅಂಶಗಳು ಮುಖ್ಯವಾಗಿ ನಿಲ್ಲತ್ತವೆ. ಪಂಚಶೀಲ ವೆಂದರೆ ಅಹಿಂಸೆ, ಸತ್ಯವನ್ನು ನುಡಿಯುದು, ಕಳ್ಳತನ ಮಾಡಬಾರದು, ಮಧ್ಯಪಾನ ಮಾಡಬಾರದು ಮತ್ತು ಪರಸ್ತ್ರೀಸಂಗ ಮಾಡಬಾರದು. ಆರ್ಯಸತ್ಯಗಳಲ್ಲಿರುವುದು ಪ್ರಪಂಚವು ದುಃಖದಿಂದ ಕೂಡಿದೆ, ದುಃಖಕ್ಕೆ ಕಾರಣ, ದುಃಖ ನಿವಾರಣೆ, ಮತ್ತು ದುಃಖವನ್ನು ನಿವಾರಿಸಲು ಅನುಸರಿಸುವ ಅಷ್ಟಾಂಗ ಮಾರ್ಗವಾಗಿದೆ. ಅಷ್ಟಾಂಗ ಮಾರ್ಗದಲ್ಲಿ. ಒಳ್ಳೆಯ ನಂಬಿಕೆ, ಒಳ್ಳೆಯ ಆಲೋಚನೆ, ಒಳ್ಳೆಯ ನಡತೆ, ಒಳ್ಳೆಯ ಮಾತು, ಒಳ್ಳೆಯ ಪ್ರಯತ್ನ, ಒಳ್ಳೆಯ ಧ್ಯಾನ, ಒಳ್ಳೆಯ ವಿಚಾರಗಳು ಮತ್ತು ಒಳ್ಳೆಯ ಜೀವನೋಪಾಯ. ಈ ಮೇಲಿನ ಅಂಶಗಳು ಬೌದ್ಧ ಧರ್ಮ ಸರಳಿಕರಣಗೋಳಿಸಿದರಿಂದ ಬೌದ್ದ ಧರ್ಮಿಯರ ಬುದುಕು ಹಗುರಾಗಿ ನೆಮ್ಮದಿಯಿಂದ ಬಾಳುವಂತಾಗಿದೆ. ಇಲ್ಲಿ ಪೂಜೆಗಳಿಗೆ ಅವಕಾಶವಿಲ್ಲ ಆರಾಧನೆಗೆ ಪ್ರಾಮುಖ್ಯವಿದೆ. ಅಪ ನಂಬಕೆಗಳಿಲ್ಲದ ಧರ್ಮ ಯಾವುದಾರು ಇಲ್ಲಿ ಇದ್ದರೆ ಅದು ಬೌದ್ಧ ಧರ್ಮ ಒಂದೆ ಎಂದರೆ ತಪ್ಪಿಲ್ಲ. ಎಲ್ಲಿರಿಗೂ ಒಂದೆ ಮಾರ್ಗ ಅದು ಬುದ್ದ ಮಾರ್ಗ.

**ಆಚರಣೆಗಳು**

ಬೌದ್ಧ ಧರ್ಮವು ಇನ್ನಿತರ ಧರ್ಮಗಳಂತೆ ತನ್ನದೆ ಆದಂತಹ ಆಚರಣೆಗಳು ಒಳಗೊಂಡಿದೆ. ಬೌದ್ಧ ಧರ್ಮದ ಸಾಮಾಜಿಕ

ಚಿಂತನೆಯಲ್ಲಿ ಧರ್ಮದ ಆಚರಣೆಗಳು ಅದರ ವಿದಿ–ವಿಧಾನಗಳ ಕುರಿತಾಗಿ ಕನ್ನಡ ಸಂಶೋಧಕರು ಬೌದ್ದ ಧರ್ಮ ಕುರಿತು ತಮ್ಮ ಸಾಹಿತ್ಯದಲ್ಲಿ ಚಿಂತನೆಗೆ ವ್ಯಕ್ತ ಪಡಿಸುತ್ತಾ ಬಂದಿದ್ದಾರೆ. ಬೌದ್ಧ ಧರ್ಮವು ಜಾಗತಿವಾಗಿ ಬೆಳದು ಬಂದಿರುವುದರಿಂದ ಅದರ ಧರ್ಮ ಆಚರಣೆಗಳು ಧರ್ಮದ ಚೌಕಟ್ಟಿನಲ್ಲಿ ನಡೆಯಬೇಕು ಎಂಬುದು ಬೌದ್ಧ ಧರ್ಮದ ಚಿಂತಕರ ವಾದವಾಗಿದೆ. ಏಕೆಂದರೆ ಬೌದ್ಧಧರ್ಮದಲ್ಲಿ ಮಾರ್ಪಾಡು ಮಾಡಲು ಹೊರಟಿರು ಪಾಶ್ಚಿಮಾತ್ಯ ಬೌದ್ಧ ಅನುಯಾಯಿಗಳ ಧೋರಣೆಯನ್ನು ಕನ್ನಡ ಚಿಂತಕರು ವಿರೋಧ ವ್ಯಕ್ತ ಪಡಿಸುತ್ತಾ ಬಂದಿದ್ದಾರೆ. "ಬೌದ್ಧ ಧರ್ಮವು ಪಂಚಶೀಲ ತತ್ವಗಳ ಪ್ರಧಾನ ನೆಲೆಯಲ್ಲಿ ಗೋಚರಿಸುತ್ತದೆ. ಇಂತಹ ಪಂಚಶೀಲ ತತ್ವಗಳಿಗೆ ಧಕ್ಕೆಯಾದರೆ ಅದು ಬುದ್ಧನಿಗೆ ಮಾಡಿದ ಅನಾಚಾರವೆಂಬ ಭಾವನೆ ಕನ್ನಡದ ಚಿಂತಕರದ್ದಾಗಿದೆ."[೩] ಬೌದ್ಧ ಧರ್ಮಕ್ಕೆ ಮತಾಂತರಗೊಂಡಿರುವ ಕನ್ನಡದ ಅಸಂಖ್ಯಾತ ದಲಿತ ಸಮುದಾಯದ ಅಸ್ಪಶ್ಯರು ತಮ್ಮ ಮೂಲ ದೈವಾರಾಧನೆ ಪದ್ದತಿಯನ್ನು ಇಲ್ಲಿಯೂ ಮುಂದೊರೆಸಿಕೊಂಡು ಬಂದಿರುವುದು ಕಾಣಬಹುದು. ಬೌದ್ಧ ಧರ್ಮದ ಮುಖ್ಯ ಆಚರಣೆಯಲ್ಲಿ 'ಅಹಿಂಸೆ' ಅನಿವಾರ್ಯವಾಗಿದೆ. ಈ ರೀತಿಯಾಗಿ ಬೌದ್ಧ ಧರ್ಮದಲ್ಲಿನ ಆಚರಣೆಗಳ ಕುರಿತಾಗಿ ಕನ್ನಡ ಸಂಶೋಧನಾ ಸಾಹಿತ್ಯದಲ್ಲಿ ಚಿಂತನೆಗಳು ನಡೆದಿರುವುದು ಕಂಡುಬರುತ್ತವೆ. ಈ ಸಾಮಾಜಿಕ ಚಿಂತನೆಯಲ್ಲಿನ ಮುಖ್ಯವಾಗಿ ಬೌದ್ಧ ಧರ್ಮದ ನೆಲೆಯಲ್ಲಿರುವ ಜಾತಿ ,ಲಿಂಗ/ಮಹಿಳೆ, ನಂಬಿಕೆ ಮತ್ತು ಆಚರಣೆಗಳು ಜಗತ್ತಿ ಎಲ್ಲಾ ಧರ್ಮಗಳಿಗಿಂತ ಭಿನ್ನಾವಾಗಿ ಕಾಣುತ್ತವೆ. ಕನ್ನಡ ಸಾಹಹಿತ್ಯವು ಸಮಕಾಲಿನ ಸಮಾಜದ ಆಗು ಹೊಗುಗಳಿಗೆ ಪೂರಕವಾದ ನೆಲೆಯನ್ನು ಬೌದ್ದ ಧರ್ಮದ ಸಾರವನ್ನು ಸಾಮಾಜಿಕ ಚಿಂತನೆಯ್ಲುಲಿ ಕಂಡುಕೊಳ್ಳಾಗಿದೆ.

**ಅಡಿ ಟಿಪ್ಪಣಿಗಳು**

1. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು– ಸಂಶೋಧನ ಮಹಾಪ್ರಬಂಧ– ಓಬಳಪ್ಪ.ಕೆ.ಎ –ಪುಟ ಸಂಖ್ಯ–೩೭
2. ಸಾಹಿತ್ಯ ಮಹಿಳೆ ಮತ್ತು ಸಮಲಿಕರಣ– ಬಿ.ಪಿ. ಮಹೇಶ ಚಂದ್ರಗುರು– ಪುಟ ಸಂಖ್ಯ– ೧೧೩
3. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು– ಸಂಶೋಧನ ಮಹಾಪ್ರಬಂಧ– ಓಬಳಪ್ಪ.ಕೆ.ಎ –ಪುಟ ಸಂಖ್ಯ –೧೪೬

**ಪರಾಮರ್ಶೆ ಗ್ರಂಥಗಳು**


1. ಕನ್ನಡದಲ್ಲಿ ಬೌದ್ಧ ಸಾಹಿತ್ಯ– ಡಾ. ಸುಷ್ಮಾ ಎನ್. ಹಾಗರಗಿ.
2. ೨)ಮ.ನ ಜವರಯ್ಯ.–ಅಂಬೇಡ್ಕರ ಮತ್ತು ಸಾಜಿಕ ನ್ಯಾಯ
3. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು